ಫೋಟೊಗ್ರಫಿ ನನ್ನ ಹಗಲು ವೇಷವಾಗಿದ್ದರೆ, ಫೋರ್ಜರರ್ ನನ್ನ ರಾತ್ರಿ ವೇಷವಾಗಿತ್ತು.

★★★

ಈ ಕೆಲಸದಲ್ಲಿ ಪ್ರತಿ ನಿಮಿಷವೂ ಅಮೂಲ್ಯವಾಗಿತ್ತು. ನಮ್ಮ ತಂಡದೊಂದಿಗೆ ಇನ್ನೂ ಹಲವು ತಂಡಗಳು ತೊಂದರೆಗೆ ಸಿಲುಕಿದ್ದ ಜನರನ್ನು ಪಾರುಮಾಡಲು ಕೆಲಸಮಾಡುತ್ತಿತ್ತು. ಎಲ್ಲರೂ ಒಬ್ಬರಿಗೊಬ್ಬರು ಅಗತ್ಯವಿದ್ದಲ್ಲಿ ನೆರವು ನೀಡುತ್ತಿದ್ದರು. ಯುದ್ಧ ಏರಿಳಿತಗಳಲ್ಲಿ ಮುಂದುವರೆದಿತ್ತು. ನಾಜ಼ಿಗಳು ಯಹೂದಿಗಳನ್ನು ಹೇಗಾದರೂ ನಿರ್ನಾಮ ಮಾಡಲು ಪಣತೊಟ್ಟಿದ್ದರು. ಜಿಯೋನಿಸ್ಟ್ ದೇಶವೊಂದನ್ನು ಯಹೂದಿಗಳಿಗಾಗಿ ಕಟ್ಟಲು ಹೋರಾಟಗಳು ನಡೆಯುತ್ತಲೇ ಇದ್ದವು. ಹೀಗಿರುವಾಗಲೇ ಒಮ್ಮೆ ಪೆಂಗ್ವನ್ ತಾನೇ ಖುದ್ದಾಗಿ ನನ್ನನ್ನು ಭೇಟಿಯಾಗಲು ಬರುವುದಾಗಿ ತಿಳಿಸಿದ. ಅವನೇ ಬರುತ್ತಿದ್ದಾನೆ ಅಂದ ಮೇಲೆ ವಿಷಯ ಬಹಳ ಗಂಭೀರವಾದದ್ದು ಎಂದು ಊಹಿಸಿದೆ. ಅವನು ಹೊತ್ತು ತಂದ ವಿಷಯ ಎದೆನಡುಗಿಸುವಂತದ್ದು. ಒಂದೆಡೆ ಯುದ್ಧದಿಂದ ಸೇನೆಯನ್ನು ಹಿಂದಕ್ಕೆ ಕರೆಸಿಕೊಳ್ಳುತ್ತಿರುವುದಾಗಿ ಹೇಳಿದ್ದ ನಾಜ಼ಿಗಳು ಮತ್ತೊಂದೆಡೆ ಆದಷ್ಟು ಬೇಗ ಎಷ್ಟು ಸಾಧ್ಯವೋ ಅಷ್ಟು ಯಹೂದಿಗಳನ್ನು ಮುಗಿಸುವ ಸಂಚು ಮಾಡಿದ್ದರು. ಪ್ಯಾರಿಸ್‌ನಲ್ಲಿ ಹತ್ತು ಮಕ್ಕಳ ಆಶ್ರಮಗಳ ಮೇಲೆ ಏಕಕಾಲಕ್ಕೆ ದಾಳಿ ಮಾಡಿ ಯಹೂದಿ ಮಕ್ಕಳನ್ನು ಕೊಲ್ಲುವುದು ಅವರ ಸಂಚಿನ ಭಾಗವಾಗಿತ್ತು. ಮುನ್ನೂರಕ್ಕೂ ಹೆಚ್ಚಿದ್ದ ಮಕ್ಕಳನ್ನು ಅಲ್ಲಿಂದ ಸಾಗಿಸಲು ನಕಲಿ ದಾಖಲೆಗಳನ್ನು ಮೂರೇ ದಿನದಲ್ಲಿ ಸೃಷ್ಟಿಸಿಕೊಡಬೇಕಿತ್ತು. ಪ್ರತಿ ಮಗುವಿಗೂ ಮೂರು ದಾಖಲೆಗಳು ಅಂದರೆ 900ಕ್ಕೂ ಹೆಚ್ಚಿನ ದಾಖಲೆಗಳನ್ನು ಸೃಷ್ಟಿಸುವ ಕೆಲಸ! ನಾನು ಅಕ್ಷರಶಃ ನಡುಗಿಹೋದೆ. ನನ್ನೆಲ್ಲ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ನೋಡಿದರೂ ಅಷ್ಟು ಕಡಿಮೆ ಅವಧಿಯಲ್ಲಿ ಆ ಪ್ರಮಾಣದ ದಾಖಲೆಗಳನ್ನು ಸೃಷ್ಟಿಸುವುದು ಸಾಧ್ಯವಿರಲಿಲ್ಲ.

ನನ್ನ ಪ್ರಯೋಗಾಲಯಕ್ಕೆ ಹಿಂತಿರುಗಿ ಬರುವ ವೇಳೆಗೆ ಈ ವಿಷಯ ತಿಳಿದ ನನ್ನೆಲ್ಲ ಸ್ನೇಹಿತರು ನನ್ನೊಂದಿಗೆ ಕೆಲಸ ಮಾಡಲು ಅಲ್ಲಿಗೆ ಬಂದಿದ್ದರು. ಎಲ್ಲರೂ ಕೆಲಸದಲ್ಲಿ ತೊಡಗಿಸಿಕೊಂಡೆವು. ರೋಬೋಟುಗಳ ಹಾಗೆ ಒಂದೇ ಸಮ ಕೆಲಸ, ಕೆಲಸ. ನನ್ನ ಲೆಕ್ಕಾಚಾರ ಹೀಗಿತ್ತು: ಒಂದು ಗಂಟೆಗೆ ನಾನು 30 ದಾಖಲೆ ಸೃಷ್ಟಿಸಬಲ್ಲೆ. ಹಾಗಾಗಿ ಒಂದು ಗಂಟೆ ನಾನೇನಾದರೂ ನಿದ್ದೆ ಮಾಡಿದರೆ 30 ಮಕ್ಕಳ ಪ್ರಾಣ ಹೋಗುತ್ತದೆ.

ಮೂರನೆಯ ದಿನದ ವೇಳೆಗೆ ನಿದ್ರೆ, ಆಯಾಸಗಳಿಂದ ನನ್ನ ದೇಹ ನಿಯಂತ್ರಣ ಕಳೆದುಕೊಳ್ಳಲು ಶುರುಮಾಡಿತ್ತು. ನಮ್ಮನ್ನು ನಾವೇ ಹುರಿದುಂಬಿಸಿಕೊಳ್ಳಲು 810... 811... ಎಂದು ಗುರಿಯ ಹತ್ತಿರವಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದೆವು. ಅಂದುಕೊಂಡಂತೆ ಗುರಿ ತಲುಪಿದ್ದೆವು. ಅಸಾಧ್ಯವಾದುದನ್ನು ಸಾಧಿಸಿದ್ದೆವು. ಸಮಯಕ್ಕೆ ಸರಿಯಾಗಿ ಕೇಳಿದ್ದನ್ನು ಒದಗಿಸುವುದು ನನ್ನ ಗೀಳಾಗಿಬಿಟ್ಟಿತು.

★★★

ಹೇಗಾದರೂ ಯುದ್ಧ ನಿಲ್ಲಿಸಬೇಕು. ಯುದ್ಧದಿಂದಾಗಿ ಹಾನಿಗೊಳಗಾದವರಿಗೆ ನೆರವಾಗಬೇಕು ಅನ್ನುವುದು ನನ್ನ ಉದ್ದೇಶವಾಗಿತ್ತು. ಹಾಗಾಗಿ ಸೇನೆಯ ಜೊತೆ ಕೆಲಸ ಮಾಡಲು ಶುರುಮಾಡಿದೆ. ನಿರಾಶ್ರಿತರ ಶಿಬಿರಗಳಲ್ಲಿ ಸೆರೆ ಸಿಕ್ಕವರ ಮೇಲೆ ನಡೆಸುತ್ತಿದ್ದ ಅಮಾನವೀಯ ಸಂಶೋಧನೆಗಳಿಂದ ಜನರನ್ನು ಕಾಪಾಡಲು ಫ್ರೆಂಚ್ ಸೇನೆ ಪ್ರಯತ್ನಿಸುತ್ತಿತ್ತು. ಅದಕ್ಕಾಗಿ ತನ್ನ ಗುಪ್ತಚರ ದಳದವರನ್ನು ದೇಶದ ಗಡಿದಾಟಿಸಲು ನಕಲಿ ದಾಖಲೆಗಳನ್ನು ಸೃಷ್ಟಿಸುವವನನ್ನು ಹುಡುಕುತ್ತಿತ್ತು. ಆ ವೇಳೆಗಾಗಲೇ ನನ್ನ ಹೆಸರು ಆ ವಲಯದಲ್ಲಿ ಹೆಸರುವಾಸಿಯಾಗಿತ್ತು. ಆ ಕೆಲಸ ನನಗೆ ಸಿಕ್ಕಿತು.